# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 333 (530) |
| ಸದಸ್ಯರ ಹೆಸರು | : ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 19.02.2024 |
| ಉತ್ತರಿಸಬೇಕಾದ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆರ್‌ಟಿಇ ಕಾಯಿದೆಯ ಉದ್ದೇಶವೇನು; ಆರ್ ಟಿಇ ಕಾಯಿದೆಯಡಿಯಲ್ಲಿ ವಿದ್ಯಾರ್ಥಿಗಳ ಆಯ್ಕೆ ಯಾವ ರೀತಿ ನಡೆಯುತ್ತದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | • 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.<br><br>• ಶಿಕ್ಷಣ ಹಕ್ಕು ಕಾಯಿದೆ 2009ರ ಸೆಕ್ಷನ್ 12(1)(ಬಿ) ಅಡಿ ಅನುದಾನಿತ ಶಾಲೆಗಳು ಮತ್ತು 12(1)(ಸಿ) ಅನುದಾನರಹಿತ ಶಾಲೆಗಳಿಗೆ ಶೇ.25% ಮೀಸಲಾತಿಯನ್ವಯ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲ ವರ್ಗದ ನೆರೆಹೊರೆಯಲ್ಲಿನ ಮಕ್ಕಳಿಗೆ ಸೀಟುಗಳನ್ನು ಹಂಚಿಕೆ ಮಾಡಲಾಗುವುದು.<br><br>• ಸರ್ಕಾರದ ಆದೇಶ ಸಂಖ್ಯೆ: ಇಡಿ 273 ಮಾಹಿತಿ 2014, ದಿನಾಂಕ:14.01.2015ರನ್ವಯ ಆರ್.ಟಿ.ಇ ಲಾಟರಿ ಪ್ರಕ್ರಿಯೆಯನ್ನು ಅನ್ ಲೈನ್ ಮೂಲಕ ಪಾರದರ್ಶಕವಾಗಿ ನಿರ್ವಹಿಸಲಾಗುತ್ತಿದೆ.<br><br>• ಸರ್ಕಾರದ ಆದೇಶ ಸಂಖ್ಯೆ:ಇಡಿ 51 ಪಿಜಿಸಿ 2016(ಪಿ), ದಿನಾಂಕ:08.02.2016ರನ್ವಯ ಅನಾನುಕೂಲ ಮತ್ತು ದುರ್ಬಲ ವರ್ಗಗಳನ್ನು ಗುರುತಿಸಲಾಗಿದ್ದು ವಿವರಗಳು ಈ ಕೆಳಕಂಡಂತಿದೆ:-<br>ಅನಾಥ ಮಗು,<br>ಪರಿಶಿಷ್ಟ ಜಾತಿ,<br>ವಿಶೇಷ ಅಗತ್ಯತೆಯುಳ್ಳ ಮಗು,<br>ಪರಿಶಿಷ್ಟ ಪಂಗಡ,<br>ಹೆಚ್.ಐ.ವಿ ಸೋಂಕಿತ /ಬಾಧಿತ ಮಗು,<br>ಪ್ರವರ್ಗ-1,<br>ವಲಸೆ / ಬೀದಿ ಮಗು,<br>ಪ್ರವರ್ಗ-2ಎ,<br>ಬರಗಾಲದ ಕಾರಣ ಅತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ಮಗು, |

ಪ್ರವರ್ಗ–2ಬಿ,

ಪ್ರವರ್ಗ–3ಎ,

ಮಂಗಳಮುಖಿ,

ಪ್ರವರ್ಗ–3ಬಿ,

ದುರ್ಬಲ ವರ್ಗ,

ಆರ್.ಟಿ.ಇ ಅಡಿ ಶೇ.25% ಸೀಟುಗಳನ್ನು ಈ ಕೆಳಕಂಡಂತೆ ಮೀಸಲಿರಿಸಲಾಗಿದೆ.

1. ಎಸ್.ಸಿ ವರ್ಗಕ್ಕೆ ಮೀಸಲಾತಿ–7.5%
2. ಎಸ್.ಟಿ ವರ್ಗಕ್ಕೆ ಮೀಸಲಾಗಿ–1.5%
3. ಇತರೆ ಪ್ರವರ್ಗದ ಮಕ್ಕಳಿಗೆ–16%

- ಸರ್ಕಾರಿ ಆದೇಶ ಸಂಖ್ಯೆ:ಇಡಿ 36 ಪಿಜಿಸಿ 2018, ದಿನಾಂಕ: 30.01.2019ರ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು (ತಿದ್ದುಪಡಿ) ನಿಯಮಗಳು 2018ರಲ್ಲಿ "ಅವಕಾಶ ವಂಚಿತ ಮತ್ತು ದುರ್ಬಲ ವರ್ಗದ ಮಕ್ಕಳ ಪ್ರವೇಶಾತಿಗಾಗಿ ನೆರೆಹೊರೆ ಸರ್ಕಾರಿ ಅಥವಾ ಅನುದಾನಿತ ಶಾಲೆಗಳು ಲಭ್ಯವಿದ್ದಲ್ಲಿ 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ–ಖಂಡದ ಅಡಿಯಲ್ಲಿ ಬರುವ ಯಾವುದೇ ಅನುದಾನರಹಿತ ಶಾಲೆಯನ್ನು ಗುರುತಿಸತಕ್ಕದ್ದಲ್ಲ" ಎಂದು ನಿಯಮ ರಚಿಸಲಾಗಿದೆ. ಅದರಂತೆ 2019–20ನೇ ಸಾಲಿನಿಂದ ಆರ್.ಟಿ.ಇ ದಾಖಲಾತಿಗೆ ಕ್ರಮವಹಿಸಲಾಗುತ್ತಿದೆ.
- ಆರ್.ಟಿ.ಇ ಕಾಯ್ದೆಯಡಿಯಲ್ಲಿ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯು ಆನ್‌ಲೈನ್ ತಂತ್ರಾಂಶದ ಮೂಲಕ ಈ ಕೆಳಕಂಡ ಹಂತಗಳ ಮೂಲಕ ನಡೆಸಲಾಗುತ್ತದೆ:–

1. ನೆರೆಹೊರೆಯ ಎಲ್ಲಾ ಶಾಲೆಗಳನ್ನು ಮ್ಯಾಪಿಂಗ್ ಮಾಡುವುದು ಹಾಗೂ ಅರ್ಹ ಶಾಲೆಗಳ ಪಟ್ಟಿ ಪ್ರಕಟಿಸುವುದು.
2. ಶಾಲೆಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿ ಪ್ರಕಟಿಸುವುದು.
3. ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು, ಹಾಗೂ ದಾಖಲೆಗಳ ನೈಜತೆಯನ್ನು ಅನ್‌ಲೈನ್ ಮೂಲಕ ಪರೀಕ್ಷಿಸುವುದು.
4. ಅರ್ಜಿಗಳಲ್ಲಿನ ದೋಷಗಳ ಕುರಿತು ಪೋಷಕರಿಗೆ ಎಸ್.ಎಂ.ಎಸ್ ರವಾನಿಸಿ ಸರಿಪಡಿಸಿ ಸಲ್ಲಿಸಲು ತಿಳಿಸುವುದು.
5. ಇ.ಐ.ಡಿ ಮತ್ತು ವಿಶೇಷ ಪ್ರವರ್ಗದಡಿ ಸಲ್ಲಿಸಿರುವ ಅರ್ಜಿಗಳ ನೈಜತೆಯ ಪರಿಶೀಲನೆಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸುವುದು.
6. ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದು.

| | | |
|---|---|---|
| | | 7. ಆನ್‌ಲೈನ್ ಲಾಟರಿ ಮೂಲಕ ಸೀಟು ಹಂಚಿಕೆ ಮಾಡುವುದು.<br>8. ಪೋಷಕರ ಮೊಬೈಲ್ ಸಂಖ್ಯೆಗೆ ಸೀಟು ಹಂಚಿಕೆ ಬಗ್ಗೆ ಎಸ್.ಎಂ.ಎಸ್ ಕಳುಹಿಸುವುದು.<br>9. ಶಾಲಾ ಲಾಗಿನ್ ಮೂಲಕ ಆನ್‌ಲೈನ್ ದಾಖಲಾತಿ ಪ್ರಕ್ರಿಯೆ ನಿಯಮಾನುಸಾರ ನಡೆಯುತ್ತದೆ. |
| ಆ) | ಆರ್‌ಟಿಇ ಕಾಯಿದೆಯ ಅನುಷ್ಠಾನದಿಂದ 1 ರಿಂದ 8ನೇ ತರಗತಿವರೆಗೂ ಪ್ರವೇಶ ಶುಲ್ಕವನ್ನು ಸರ್ಕಾರವೇ ನೀಡುತ್ತಿದ್ದು, 8ನೇ ತರಗತಿಯಿಂದ ದ್ವಿತೀಯ ಪಿಯುಸಿ ವರೆಗೂ ಈ ಯೋಜನೆಯನ್ನು ವಿಸ್ತರಿಸುವುದರಿಂದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಬಡಮಕ್ಕಳಿಗೆ ಅನುಕೂಲವಾಗುವುದರಿಂದ ಸರ್ಕಾರವು ಈ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಚಿಂತಿಸಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಇಲ್ಲ |
| ಇ) | ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯಕ್ರಮವನ್ನು ಯಾವ ಕಾರಣಕ್ಕಾಗಿ ಅಳವಡಿಸುತ್ತಿಲ್ಲ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸ್ಥಳೀಯ ಹಾಗೂ ಪ್ರಾದೇಶಿಕ ಇತಿಹಾಸದ ಅರಿವಿನ ಔಚಿತ್ಯವಿರುವುದರಿಂದ, ಸರ್ಕಾರಿ ಶಾಲೆಗಳಲ್ಲಿ ಭಾಷೆಗಳು ಮತ್ತು ಸಮಾಜ ವಿಜ್ಞಾನ ವಿಷಯಕ್ಕೆ ರಾಜ್ಯ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ |
| ಈ) | ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯಕ್ರಮವಿಲ್ಲದೇ ಇರುವುದರಿಂದ ಆರ್‌ಟಿಇ ಕಾಯಿದೆಯಡಿ ಬಡಮಕ್ಕಳು ಖಾಸಗಿ ಶಾಲೆಗಳಿಗೆ ದಾಖಲಾಗುತ್ತಿದ್ದು, ಸರ್ಕಾರಿ ಶಾಲೆಗಳಲ್ಲೂ ಸಿಬಿಎಸ್‌ಇ ಪಠ್ಯಕ್ರಮ ಜಾರಿಗೊಳಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ? (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರಿ ಶಾಲೆಗಳಲ್ಲಿ 6 ರಿಂದ 10ನೇ ತರಗತಿವರೆಗಿನ ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ, ಸಿ.ಬಿ.ಎಸ್.ಇ ಪಠ್ಯಕ್ರಮವನ್ನು ಅಳವಡಿಸಲಾಗಿದೆ. |

ಸಂಖ್ಯೆ: ಇಪಿ 25 ಪಿಜಿಸಿ 2024

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು